**ಓ.ಎಸ್.ನಂಃ 128/2023**

**ಪಿಡಬ್ಲ್ಯೂ-3**

**ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 12.01.2026 ರಂದು ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ಪರ ವಕೀಲರಿಂದಃ**

ವಾದಿ ಮತ್ತು ಪ್ರತಿವಾದಿಗಳ ನಡುವೆ ವಿಭಾಗಕ್ಕಾಗಿ ದಾವೆ ಚಾಲ್ತಿ ಇರುವ ಬಗ್ಗೆ ನನಗೆ ಗೊತ್ತಿಲ್ಲ. ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ವಿಭಾಗಕ್ಕಾಗಿ ಓ.ಎಸ್.ಸಂಖ್ಯೆ: 12/2023 ನ್ನು ವಾದಿಯ ಸಹೋದರಿಯರು ವಾದಿ ಮತ್ತು ಪ್ರತಿವಾದಿಗಳ ವಿರುದ್ಧ ಹೂಡಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ಪ್ರಮಾಣ ಪತ್ರ ಸಲ್ಲಿಸುವ ಪೂರ್ವದಲ್ಲಿ ವಾದಿ ನನಗೆ ಸದರಿ ದಾವೆಯ ಬಗ್ಗೆ ಹೇಳಿದ್ದರು. ವಾದಿಯ ಸಹೋದರಿಯರು ವಿಭಾಗಕ್ಕಾಗಿ ಸಲ್ಲಿಸಿರುವ ದಾವೆಯ ಬಗ್ಗೆ ವಾದಿ ನನಗೆ ಹೇಳಿದ್ದರು. ಓ.ಎಸ್.ಸಂಖ್ಯೆ: 12/2023 ರಲ್ಲಿ ಈ ದಾವ ಸ್ವತ್ತು ಒಳಗೊಂಡಿರುವ ಬಗ್ಗೆ ವಾದಿ ನನಗೆ ಹೇಳಿದ್ದರು. ವಾದಿಗೆ ದಾವ ಸ್ವತ್ತು ಆತನ ಅಣ್ಣನಿಂದ ಬಂದಿದ್ದು ಆ ಬಗ್ಗೆ ವಾದಿ ನನಗೆ ಹಕ್ಕಿನ ದಾಖಲೆಯನ್ನು ತೋರಿಸಿದ್ದಾರೆ. ವಾದಿ ತನ್ನ ಹೆಸರಿಗೆ ಖಾತಾ ಬದಲಾವಣೆಯಾದ ಬಗ್ಗೆ ದಾಖಲೆ ತೋರಿಸಿದ್ದಾರೆ. ಆದರೆ ನೋಂದಾಯಿತ ದಾಖಲೆಯನ್ನು ತೋರಿಸಿಲ್ಲ. ವಾದಿ ನನಗೆ ಆತ್ಮೀಯರಾದ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ